ಇಲಾಖೆ / ವಿಷಯ : DEPARTMENT / SUBJECT: ಗೃಹ- ಬೆಂಗಳೂರು ಗಲಭೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 12/9/2020

# ಶಾಸಕರ ಮನೆಗೆ ಬೆಂಕಿ ಹಚ್ಚಿದ್ದ ಮುಜಾಯಿದ್ ಸೆರೆ

■ **ವಿಕ ಸುದ್ದಿಲೋಕ** ಬೆಂಗಳೂರು

ಡಿ.ಜೆ.ಹಳ್ಳಿ ಗಲಭೆ ವೇಳೆ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಮನೆಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದ ಮುಜಾಯಿದ್ ಅಲಿಯಾಸ್ ವಾಟರ್ ಮುಜಾಯಿದ್ ನನ್ನು ಪೊಲೀಸರು ಬಂಧಿಸಿದ್ದಾರೆ.



ಆ.11 ರ ರಾತ್ರಿ ನೂರಾರು ಮಂದಿಯನ್ನು ಪ್ರಚೋದಿಸಿ ಬೆಂಕಿ ಹಚ್ಚಿದ ಬಳಿಕ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಪರಾರಿಯಾಗಿದ್ದ ಈತ ಪೊಲೀಸರೆಲ್ಲ ಡಿ.ಜೆ.ಹಳ್ಳಿ ಗಲಭೆ ಮರೆತು ಡ್ರಗ್ ಪ್ರಕರಣದಲ್ಲಿ ಮುಳುಗಿದ್ದಾರೆ ಎಂದುಕೊಂಡು ಮನೆಗೆ ವಾಪಸಾಗಿದ್ದ. ಈತ ವಾಪಸಾಗಿರುವುದನ್ನು ಅಕ್ಕಪಕ್ಕದ ಮನೆಯವರಿಂದಲೇ ತಿಳಿದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಶಾಸಕರ ಮನೆಗೆ ಬೆಂಕಿ ಹಚ್ಚಲು ಜನರನ್ನು ಪ್ರಚೋದಿಸಿದ್ದಲ್ಲದೆ ತಾನೇ ಪೆಟ್ರೋಲ್ ಸುರಿದು ಮನೆಗೆ ಬೆಂಕಿ ಹಚ್ಚಿದ್ದ. ಪೊಲೀಸರು ಏರಿಯಾದಲ್ಲಿ ಹೆಚ್ಚು ಜಮಾಯಿಸುತ್ತಿದ್ದಂತೆಯೇ ಸ್ಥಳದಿಂದ ಪರಾರಿಯಾಗಿದ್ದ. 29 ದಿನಗಳಿಂದ ಬೇರೆ ಬೇರೆ ಜಿಲ್ಲೆಗಳಲ್ಲೇ ಓಡಾಡಿಕೊಂಡು ತಲೆಮರೆಸಿಕೊಂಡಿದ್ದ. ಮೊಬೈಲ್ ಆಫ್ ಮಾಡಿದ್ದ ಈತ ಸ್ನೇಹಿತರು ಮತ್ತು ಸಂಬಂಧಿಕರ ಮನೆಗಳಲ್ಲಿ ಉಳಿದುಕೊಳ್ಳುತ್ತಿದ್ದ. ಒಂದು ಮನೆಯಲ್ಲಿ ಒಂದು ದಿನ ಮಾತ್ರ ಉಳಿಯುತ್ತಾ ಊರೂರು ಸುತ್ತುತ್ತಿದ್ದ.



**ಅಕ್ಕಪಕ್ಕದ ಮನೆಯವರಿಂದ ದೊರೆತ ಮಾಹಿತಿ**

**ಬೇರೆ ಬೇರೆ ಜಿಲ್ಲೆಗಳಲ್ಲಿ ತಲೆಮರೆಸಿಕೊಂಡಿದ್ದ**

ಈತನ ಸುಳಿವು ಪೊಲೀಸರಿಗೆ ಸಿಗುತ್ತಿತ್ತಾದರೂ ಆ ಸ್ಥಳಕ್ಕೆ ಧಾವಿಸುವಷ್ಟರಲ್ಲಿ ಆತ ಮತ್ತೊಂದು ಸ್ಥಳಕ್ಕೆ ಪರಾರಿಯಾಗಿ ಬಿಡುತ್ತಿದ್ದ. ಹೀಗಾಗಿ, ಆರೋಪಿ ಮನೆಗೆ ಬಂದೇ ಬರುತ್ತಾನೆ ಎಂದು ಆತನ ಮನೆಯ ಅಕ್ಕಪಕ್ಕದವರನ್ನೇ ಮಾಹಿತಿದಾರರನ್ನಾಗಿ ಮಾಡಿಕೊಂಡು ನಿಗಾ ಇಟ್ಟಿದ್ದರು. ಮುಜಾಯಿದ್ ಗುರುವಾರ ಸಂಜೆ ಕದ್ದು ಮುಚ್ಚಿ ತನ್ನ ಮನೆ ಸೇರಿಕೊಂಡ ಹತ್ತೇ ನಿಮಿಷದಲ್ಲಿ ಆತನನ್ನು ಪೊಲೀಸರು ಬಂಧಿಸಿದ್ದಾರೆ.

ಶಾಸಕ ಅಖಂಡ ಶ್ರೀನಿವಾಸಮೂರ್ತಿ ಬಳಿ ದೂರು ಹೇಳಿದ್ದ ಸ್ಥಳೀಯರು, ಮನೆಗೆ ಬೆಂಕಿ ಹಚ್ಚಲು ಮುಖ್ಯ ಕಾರಣಕರ್ತನಾಗಿದ್ದವನು ಮತ್ತು ಬೆಂಕಿ ಹಚ್ಚಿದ್ದವನು ಈತನೇ ಎಂದು ತಿಳಿಸಿದ್ದರು. ಈ ಮಾಹಿತಿಯನ್ನು ಶಾಸಕರು ಪೊಲೀಸರಿಗೂ ತಿಳಿಸಿದ್ದರು.